





ಸುದ್ದಿ ಸಂಚಯ

# ಐರ್ಲೆಂಡಿನಲ್ಲಿ ರಾಮಕೃಷ್ಣ ವೇದಾಂತ ಸೆಂಟರ್ ಆರಂಭ

ಐರ್ಲೆಂಡ್ ದೇಶದ ಆಡಳಿತ ಕೇಂದ್ರವಾದ **ಡಬ್ಲಿನ್**ನಲ್ಲಿ ೨೦೧೮ರ ಜೂನ್ ೧೭ ರಂದು **ರಾಮಕೃಷ್ಣ ವೇದಾಂತ ಸೆಂಟರ್** ಆರಂಭವಾಯಿತು. ಇದರ ಉದ್ಘಾಟನೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಾದ **ಸ್ವಾಮಿ ಬೋಧಸಾರಾನಂದಜಿ** ಮಹಾರಾಜ್ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಐರ್ಲೆಂಡ್ ಕೇಂದ್ರದ ಅಧ್ಯಕ್ಷರಾಗಿ ಹೊಸದಾಗಿ ನೇಮಕಗೊಂಡಿರುವ **ಸ್ವಾಮಿ ವಿಮೋಕ್ಷಾನಂದಜಿ**, ಐರ್ ವೇದಾಂತ ಸೊಸೈಟಿಯ ಸ್ವಾಮಿ ಪೂರ್ಣಾನಂದಜಿ, ಲಂಡನ್(ಬಾರ್ನ್ ಎಂಡ್, ಯುಕೆ) ರಾಮಕೃಷ್ಣ ವೇದಾಂತ ಸೆಂಟರ್‌ನ ಸ್ವಾಮಿ ಸರ್ವಸ್ಥಾನಂದಜಿ, ನರೇಂದ್ರಪುರ ರಾಮಕೃಷ್ಣ ಮಿಷನ್ ಆಶ್ರಮದ ಸ್ವಾಮಿ ಸರ್ವಲೋಕಾನಂದಜಿ, ಐರ್ಲೆಂಡಿನಲ್ಲಿ ಭಾರತದ ರಾಯಭಾರಿಗಳಾದ ಶ್ರೀಮತಿ ವಿಜಯ್ ಠಾಕೂರ್ ಸಿಂಗ್ ಮುಂತಾದವರು ಉಪಸ್ಥಿತರಿದ್ದರು. ಇವರೊಂದಿಗೆ ಐರ್ಲೆಂಡಿನ ವೇದಿಕ್ ಹಿಂದೂ ಕಲ್ಚರಲ್ ಸೆಂಟರ್‌ನ ಮುಖ್ಯಸ್ಥರಾದ ಡಾ. ಹೇಮಂತಕುಮಾರ್, ರೋಮನ್ ಕೆಥೋಲಿಕ್ ಚರ್ಚ್‌ನ ಮಾನ್‌ಸಿಗ್ನರ್ ಎಯೋನ್ ಥಿನ್ನೆ, ಸಿಸ್ಟರ್ ಟ್ರಿನಿಟಾ ಹಾಗೂ ಕೌನ್ಸಿಲರ್ ಎಲ್. ನೊಲಾನ್ ಮುಂತಾದ ಗಣ್ಯರು ಕೂಡ ಹಾಜರಿದ್ದರು.

ಉದ್ಘಾಟನಾ ಭಾಷಣದ ನಂತರ ರಾಮಕೃಷ್ಣ ಮಿಷನ್ನಿನ ಇತರ ಸಂನ್ಯಾಸಿಗಳು ಸೋದರಿ ನಿವೇದಿತಾಳ ಜೀವನ ಹಾಗೂ ಸಾಧನೆಗಳನ್ನು ಕುರಿತು ಮಾತನಾಡಿದರು. ಅನಂತರ ಡಬ್ಲಿನ್ ಅಂತರ್ಧರ್ಮೀಯ ವೇದಿಕೆ (Interfaith Forum)ಯ ಶ್ರೀಮತಿ ಹೆಚ್. ಅಬ್ರಹಾಮ್ ಮತ್ತು ಶ್ರೀ ಎ.ಕ್ರಿಸ್ಟಿಯಾ ಹಾಗೂ ವೇದಿಕ್ ಹಿಂದೂ ಕಲ್ಚರಲ್ ಸೆಂಟರ್‌ನ ಡಾ.ಹೇಮಂತ್ ಕುಮಾರ್ ಅವರು ಮಾತನಾಡಿದರು.



ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಾನ್ ಸ್ಕಾಟಸ್ ಶಾಲೆಯ ವಿದ್ಯಾರ್ಥಿಗಳಿಂದ ಹಾಗೂ ಐರ್ಲೆಂಡಿನ ಸನಾತನ ಧರ್ಮ ಸಂಸ್ಥೆಯ ವಿದ್ಯಾರ್ಥಿಗಳಿಂದ ವೇದಘೋಷ ನಡೆಯಿತು. ಸ್ವಾಮಿ ಪೂರ್ಣಾನಂದರು ನಿವೇದಿತಾಳನ್ನು ಕುರಿತು ಬರೆದ ಕವನವನ್ನು ವಾಚಿಸಲಾಯಿತು. ಶ್ರೀ ಬ್ರಿಯಾನ್ ಓ-ಹಲೂಯಿನ್ ಅವರಿಂದ 'ಉಯಿಲಿಯಾನ್ ಪೈಪ್ ಸಂಗೀತ' ಕೂಡ ನಡೆಯಿತು. ನಿವೇದಿತಾಳ ಜನ್ಮಸ್ಥಳವಾದ ಡಂಗ್‌ನಾನ್ ಪ್ರದೇಶದಿಂದ ಬಂದ ಮಿಸ್ ಜೀನ್ ಮ್ಯಾಕ್‌ಗಿನ್ನೆಸ್ ಅವರು ತಮ್ಮ 'Awakening a Nation' ಎಂಬ ನಾಟಕದ ಭಾಗಗಳನ್ನು ಪ್ರಸ್ತುತಪಡಿಸಿದರು. ಇದರೊಂದಿಗೆ ಭಾರತೀಯ ಶಾಸ್ತ್ರೀಯ ನೃತ್ಯ ಪ್ರದರ್ಶನ, ಭಜನೆ ಮುಂತಾದ ಕಾರ್ಯಕ್ರಮಗಳು ನಡೆದವು. ಶ್ರೀ ಶೇ ಮೊರಾನ್ ಹಾಗೂ ಸಂಗಡಿಗರು ಸ್ಥಳೀಯ ಐರಿಷ್ ಸಂಗೀತವನ್ನು ನಡೆಸಿಕೊಟ್ಟರು.

ಸೋದರಿ ನಿವೇದಿತಾಳ ಸ್ಮೃತಿಗಾಗಿ ನೂತನವಾಗಿ ನವೀಕರಿಸಿದ ಕಟ್ಟಡವನ್ನು '**ನಿವೇದಿತಾ ಹೌಸ್**' ಎಂದು ನಾಮಕರಣ ಮಾಡಲಾಯಿತು. ಸ್ವಾಮಿ ವಿಮೋಕ್ಷಾನಂದಜಿಯವರು ವಿಶೇಷ ಪೂಜೆಯನ್ನು ನೆರವೇರಿಸಿದರು. ಇಂಗ್ಲೆಂಡ್, ಉತ್ತರ ಐರ್ಲೆಂಡ್‌ನಿಂದ ಬಂದ ಸುಮಾರು ೨೦೦ ಮಂದಿ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಮೆರಿಕಾದಿಂದಲೂ ಕೆಲವು ಮಂದಿ ಭಕ್ತರು ಆಗಮಿಸಿದ್ದರು.





Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020